ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ - ಮಸೂದೆ

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE : 3.12.19.

# ಇ-ಸಿಗರೇಟ್ ನಿಷೇಧ ಮಸೂದೆಗೆ ಸಂಸತ್ ಮುದ್ರೆ

ನವದೆಹಲಿ: ದೇಶದಲ್ಲಿ ಇ-ಸಿಗರೇಟ್ ಉತ್ಪಾದನೆ, ಮಾರಾಟ, ಸಾಗಾಟ, ಶೇಖರಣೆ ಮತ್ತು ಪ್ರಚಾರ ಇನ್ನು ಶಾಶ್ವತವಾಗಿ ನಿಷೇಧಿಸಲ್ಪಡಲಿದೆ. ಈ ಕುರಿತಾದ ಮಹತ್ವದ ಮಸೂದೆಗೆ ರಾಜ್ಯಸಭೆ ಸೋಮವಾರ ತನ್ನ ಧ್ವನಿಮತದ ಅಂಗೀಕಾರ ನೀಡಿದೆ. ಲೋಕಸಭೆಯಲ್ಲಿ ಈ ಮಸೂದೆ ಕಳೆದ ಅಧಿವೇಶನದಲ್ಲೇ ಅಂಗೀಕಾರವಾಗಿತ್ತು.

ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಮೇಲಿನ ನಿಷೇಧ ಕಾಯ್ದೆ-2019ನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿತ್ತು. ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಈ ಮಸೂದೆಯ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಈ ಮಸೂದೆಯನ್ನು ನಾವು ಯಾವುದೇ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಒಳಗಾಗದೇ ರೂಪಿಸಿದ್ದೇವೆ ಎಂದು ಆರಂಭದಲ್ಲಿ ರಾಜ್ಯಸಭೆದೆ ಮಾಹಿತಿ ನೀಡಿದರು.



ತಂಬಾಕು ಲಾಬಿಗೆ ಮಣಿದಿರುವ ಸರ್ಕಾರ ಈ ಮಸೂದೆಯನ್ನು ಮಂಡಿಸುತ್ತಿದೆ ಎಂದು ರಾಜ್ಯಸಭೆಯಲ್ಲಿ ಕೆಲವು ಸದಸ್ಯರು ಗಂಭೀರ ಆರೋಪವನ್ನು ಮಾಡಿದರು. ಮಾತ್ರವಲ್ಲದೇ ಸರ್ಕಾರ ಎಲ್ಲಾ ರೀತಿಯ ತಂಬಾಕು ಉತ್ಪನ್ನಗಳನ್ನು ನಿಷೇಧಿಸುವ ಧೈರ್ಯ ತೋರಲಿ ಎಂದೂ ಸವಾಲೆಸೆದರು.

ಇದಕ್ಕೆ ಉತ್ತರವಾಗಿ ಮಾತನಾಡಿದ ಸಚಿವ ಹರ್ಷವರ್ಧನ್ ಅವರು ತಂಬಾಕು ಉತ್ಪನ್ನಗಳು ನಿಷೇಧಕ್ಕೊಳಗಾದಲ್ಲಿ ಇದರಿಂದ ಸಂತೋಷಪಡುವವರಲ್ಲಿ ನಾನೇ ಮೊದಲಿಗ ಎಂದು ಅವರು ಹೇಳಿದರು.

ನಿಕೊಟಿನ್ ಮತ್ತು ಇತರೇ ರಾಸಾಯನಿಕಗಳನ್ನು ಒಳಗೊಂಡಿರುವ ಉತ್ಪನ್ನವನ್ನು ಬಿಸಿ ಮಾಡುವ ಎಲೆಕ್ಟ್ರಾನಿಕ್ ಉಪಕರಣ ಎಂದು ಈ ಮಸೂದೆಯು ಇ-ಸಿಗರೇಟ್ ಕುರಿತಾಗಿ ವಿವರಣೆ ನೀಡುತ್ತದೆ.

ಈ ಕಾನೂನನ್ನು ಪ್ರಥಮ ಬಾರಿಗೆ ಉಲ್ಲಂಘಿಸುವ ವ್ಯಕ್ತಿಗಳಿಗೆ 1 ವರ್ಷದ ಜೈಲುವಾಸ, ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ದಂಡ ಅಥವಾ ಇವೆರಡನ್ನೂ ವಿಧಿಸುವ ಅವಕಾಶವನ್ನು ಈ ಕಾಯ್ದೆಯಲ್ಲಿನೀಡಲಾಗಿದೆ. ಆ ಬಳಿಕದ ಉಲ್ಲಂಘನೆಗಳಿಗೆ 3 ವರ್ಷದ ಜೈಲುಶಿಕ್ಷೆ ಮತ್ತು 5 ಲಕ್ಷ ರೂಪಾಯಿಗಳ ದಂಡ ವಿಧಿಸಲಾಗುತ್ತದೆ.